# ಶಾಸನಗಳ ಹಿನ್ನಲೆಯಲ್ಲಿ ‘ಆನೇಕಲ್ ತಾಲ್ಲೂಕು’ ಒಂದು ಅವಲೋಕನ

**ಮನೋಹರ್ ಎಂ.**[1]
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸ.ಪ್ರ.ದ. ಕಾಲೇಜು
ಮಾಲೂರು, ಕೋಲಾರ ಜಿಲ್ಲೆ.

**ಸುಮಾ ಆರ್.**[2]
ಪ್ರಾಧ್ಯಾಪಕರು
ಕನ್ನಡ ವಿಭಾಗ
ಎಸ್.ಜೆ.ಬಿ.ಸಿ.ಎಂ.ಎಸ್.
ಕನ್ನಡ ಸಂಶೋಧನಾ ಕೇಂದ್ರ
ಕೆಂಗೇರಿ, ಬೆಂಗಳೂರು.

**Article Link: https://aksharasurya.com/2024/01/manohar-m-suma-r/**

## ABSTRACT:

ಕ್ರಿ.ಶ. 4ನೇ ಶತಮಾನದ ಐತಿಹಾಸಿಕ ದಾಖಲೆ ಹೊಂದಿರುವ ಆನೇಕಲ್ ತಾಲ್ಲೂಕಿನಲ್ಲಿ ಪ್ರಮುಖ ಶಾಸನಗಳು ಲಭ್ಯವಾಗಿವೆ. ಪ್ರಾಚೀನ ಆನೆಮಲೆ ಪ್ರದೇಶದ ಹುಲಿಕಲ್ಲು ಎಂಬ ಸ್ಥಳದಲ್ಲೇ ಆನೇಕಲ್ಲನ್ನು ಸ್ಥಾಪಿಸಲಾಯಿತೆಂಬ ವಿವರ ಆನೇಕಲ್ ಪಾಳೆಯಗಾರರ ಕೈಫಿಯತ್ತಿನಲ್ಲಿ ಗುರುತಿಸಲಾಗಿದೆ. ಕ್ರಿ.ಶ. 4ನೇ ಶತಮಾನದಿಂದ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು, ಸುಗಟೂರು ಪಾಳೆಗಾರರು ತಾಲ್ಲೂಕಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಲಭ್ಯವಾಗಿರುವ ಪ್ರತಿಯೊಂದು ಶಾಸನಗಳು ಆನೇಕಲ್ ತಾಲ್ಲೂಕಿನ ಸಮಗ್ರ ದಾಖಲೆಗಳನ್ನು ಒದಗಿಸುವಲ್ಲಿ ಮಹತ್ವದ ಆಧಾರವನ್ನು ಒದಗಿಸಿವೆ ಎಂಬುದರ ಬಗ್ಗೆ ತಿಳಿಸುವ ಪ್ರಯತ್ನವೇ ಈ ಲೇಖನ.

## KEY WORDS:

ಶಾಸನಗಳು, ಆನೆಮಲೆ, ಗಂಗರು, ಚೋಳರು, ಪಾಳೆಯಗಾರರು, ಹುಲಿಕಲ್ಲು, ಶ್ರೀ ಪುರುಷ, ಗಂಗವಾಡಿ, ಸುಗಟೂರು.

ಸಾಮಾನ್ಯವಾಗಿ ನಾಶವಾಗುವಂತಹ ತಾಳೆಗುರಿ, ಭೂರ್ಜಪತ್ರ ಕಾಗದ ಮೊದಲಾದವುಗಳ ಮೇಲಿನ ಬರಹಗಳನ್ನು ಬಿಟ್ಟು ಬಹುಕಾಲ ಉಳಿಯುವಂತಹ ಶಿಲೆ, ಲೋಹ ಮೊದಲಾದವುಗಳ ಮೇಲಿನ ಬರಹಗಳನ್ನು ಶಾಸನಗಳೆಂದು ಕರೆಯುತ್ತಾರೆ. ಶಾಸನಗಳು ಒಂದು ಪ್ರದೇಶದ ಚಾರಿತ್ರಿಕ ಹಿನ್ನೆಲೆ, ರಾಜಕೀಯ ಆಳ್ವಿಕೆಯ ಕೈಗನ್ನಡಿ ಎಂದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿ ಸುಮಾರು ಕ್ರಿ.ಶ. 4ನೇ ಶತಮಾನದ ಐತಿಹಾಸಿಕ ದಾಖಲೆ ಹೊಂದಿರುವ ಆನೇಕಲ್ ತಾಲ್ಲೂಕಿನಲ್ಲಿ ಪ್ರಮುಖ ಶಾಸನಗಳು ಲಭ್ಯವಾಗಿವೆ.

ಆನೇಕಲ್ ತಾಲ್ಲೂಕಿನಲ್ಲಿ ಆನೇಕಲ್ ಪ್ರಾಗೈತಿಹಾಸಿಕ ಕಾಲದ ನೆಲೆಗಳು ಬೆಳಕಿಗೆ ಬಂದಿವೆಯಾದರೂ ಈ ವರೆಗೆ ವಿವರವಾದ ಸಂಶೋಧನೆಗಳು ನಡೆದಿಲ್ಲ. ತಾಲ್ಲೂಕಿನ ಬೂದಿದಿಣ್ಣೆ ಮತ್ತು ಕಾಳನಾಯಕನಹಳ್ಳಿ ಪ್ರದೇಶದಲ್ಲಿ ಆನೇಕ ಪ್ರಾಗೈತಿಹಾಸಿಕ ಅವಶೇಷಗಳು ದೊರೆತಿವೆ. ಆನೇಕಲ್ಲು ಸ್ಥಳದ ಪ್ರಸ್ತಾಪ ಹದಿನೇಳನೆಯ ಶತಮಾನದ ನಂತರದ ಶಾಸನಗಳಲ್ಲಿ ಕಂಡು ಬಂದಿದೆಯಾದರೂ 'ಆನೇ' ಎಂಬ ವಿಶೇಷ ಅಂಶವನ್ನು ಕಲ್ಲು ಎಂಬ ಸಾಮಾನ್ಯ ಅಂಶವನ್ನು ಒಳಗೊಂಡಿರುವ ಈ ಸ್ಥಳನಾಮದಲ್ಲಿ ಪ್ರಾಕೃತಿಕ ಅಂಶ ಪ್ರಧಾನವಾಗಿದೆ. ಒಟ್ಟಾರೆ ಪ್ರಾಚೀನ ಆನೆಮಲೆ ಪ್ರದೇಶದ ಹುಲಿಕಲ್ಲು ಎಂಬ ಸ್ಥಳದಲ್ಲೇ ಆನೇಕಲ್ಲನ್ನು ಸ್ಥಾಪಿಸಲಾಯಿತೆಂಬ ವಿವರ ಆನೇಕಲ್ ಪಾಳೆಯಗಾರರ ಕೈಫಿಯತ್ತಿನಲ್ಲಿ ಗುರುತಿಸಲಾಗಿದೆ.

ಕ್ರಿ.ಶ. 4ನೇ ಶತಮಾನದಿಂದ ಗಂಗ, ಚೋಳ, ಹೊಯ್ಸಳ, ವಿಜಯನಗರ ಅರಸರು, ಮೈಸೂರು ಅರಸರು, ಸುಗಟೂರು ಪಾಳೆಗಾರರು ತಾಲ್ಲೂಕಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿ ಭವ್ಯವಾಗಿಸಿದ್ದಾರೆ. ಇಂದಿಗೂ ಚಾರಿತ್ರಿಕ ಮಹತ್ವವುಳ್ಳ ಶಾಸನಗಳು, ಸ್ಮಾರಕಗಳು, ವೀರಗಲ್ಲುಗಳು ಉಳಿದುಕೊಂಡು ಬಂದಿವೆ. ಆನೇಕಲ್ ತಾಲ್ಲೂಕಿನ ಇತಿಹಾಸದ ಮೇಲೆ ಒಮ್ಮೆ ಹಿಂತಿರುಗಿ ನೋಡಿದಾಗ ಶಿಲಾಯುಗದ ಅವಶೇಷಗಳು ಕಂಡುಬರುತ್ತವೆ. ಆನೇಕಲ್ ಬಳಿ ಇರುವ ಬೂದಿದಿಣ್ಣೆ, ಕಾಳನಾಯಕನಹಳ್ಳಿ ಹಾಗೂ ಹಿಂದಿನ ಚೂಡಸಂದ್ರಗಳಲ್ಲಿ ನಾಗರೀಕತೆಯ ಕುರುಹುಗಳು ದಾಖಲಾಗಿದೆ. ಗಂಗರ ಕಾಲ ಸುಮಾರು ಕ್ರಿ.ಶ. 800ರ ಶ್ರೀಪುರುಷನ ಶಾಸನವೊಂದು ಆನೇಕಲ್ ಬಳಿ ಸಿಕ್ಕಿರುವುದರಿಂದ ಇಲ್ಲಿನ ಇತಿಹಾಸ ಗಂಗರ ಕಾಲದಿಂದ ಪ್ರಾರಂಭವಾಗುತ್ತದೆ. ಇದೇ ಗಂಗರಾಜ, 2ನೇ ನೀತಿ ಮಾರ್ಗದ ಶಾಸನವು ಕಾಡುಜಕ್ಕನಹಳ್ಳಿ ಬಳಿ ದೊರೆಕಿದೆ. ಇದರಿಂದ ಆನೇಕಲ್ ಗಂಗರ ನೇರ ಆಡಳಿತಕ್ಕೆ ಒಳಪಟ್ಟಿರಬಹುದೆಂದು ಹೇಳಬಹುದು.

ಗಂಗರ ಆಳ್ವಿಕೆಯಿಂದ ಪ್ರಾರಂಭವಾಗುವ ಇಲ್ಲಿನ ಐತಿಹಾಸಿಕ

ಪರಂಪರೆಯ ಕುರುಹುಗಳು ರಾಜಾಪುರ, ಆನೇಕಲ್, ಕಸಬಾ ರಾಜನಕೆರೆ, ಜಿಗಣಿ, ಬೊಮ್ಮಂಡಹಳ್ಳಿ, ಚಿಕ್ಕ ಇಂಡ್ಲವಾಡಿ, ಮಾಯಸಂದ್ರ, ಹಳೇಹಳ್ಳಿ, ಮರಸೂರು, ಮಡಿವಾಳ, ಹೆಬ್ಬಗೋಡಿ ಗ್ರಾಮಗಳಲ್ಲಿ ದೊರೆತಿರುತ್ತವೆ. ಇವಲ್ಲದೆ ಇನ್ನೂ ಆನೇಕ ಗ್ರಾಮಗಳಲ್ಲಿ ಗಂಗರ ಕಾಲಕ್ಕೆ ಸೇರಿದ ಶಾಸನ ರಹಿತ ವೀರಗಲ್ಲುಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಾಗಿವೆ. ಗಂಗಮಂಡಲ ಷಣ್ಣವತಿ ಸಹಸ್ರ ಅಂದರೆ ಗಂಗವಾಡಿ 96000 ಪ್ರದೇಶಕ್ಕೆ ಈ ತಾಲ್ಲೂಕಿನ ಬಹುತೇಕ ಪ್ರದೇಶಗಳು ಒಳಗೊಂಡಿದ್ದವು. ಆನೇಕಲ್ ತಾಲ್ಲೂಕು ವಾಯುವ್ಯ ಭಾಗ ಎಂದರೆ ಹುಲಿಮಂಗಲ, ಇಗ್ಗಲೂರು, ಕೂಡ್ಲು ಗ್ರಾಮಗಳು ಸೇರಿದ್ದವು.

ಸತ್ತಿವಂಗಲದ ಆನೇಯೂರು ಬಸವನೆಲ್ಲೆ, ಗಂಗವೂರು, ಕಸಂಬೂರು, ಗೊರವಗೆರೆ ಎಂಬ ಸ್ಥಳಗಳ ಉಲ್ಲೇಖ ಈ ತಾಲ್ಲೂಕಿನ ಗಂಗರ ಶಾಸನಗಳಲ್ಲಿ ಕಂಡು ಬಂದಿವೆ. ಕೊಂಗುಣಿವರ್ಮ, ಧರ್ಮಮಹಾಧಿರಾಜ, ಪುರುಷ ಎರಯಪ್ಪ ಬೂತುಗ ಮೊದಲಾದ ರಾಜರನ್ನು ಈ ತಾಲ್ಲೂಕಿನ ಗಂಗರ ಶಾಸನಗಳು ಉಲ್ಲೇಖಿಸುತ್ತವೆ. "ಕೊವಳಾಲ ಪುರವರಾಧೀಶ್ವರ ನಂದಗಿರಿನಾಥ" ಎಂಬ ಗಂಗರ ಬಿರುದಾವಳಿ ಶಾಸನವೊಂದರಲ್ಲಿ ಬಂದಿದೆ. ಬೂತುಗ ಮತ್ತು ಮೃಣಾಲರ ಉಲ್ಲೇಖವಿರುವ ಇಲ್ಲಿನ ಗಂಗರ ಶಾಸನಗಳ ಹಿನ್ನೆಲೆಯಲ್ಲಿ ರಾಷ್ಟ್ರಕೂಟರ ನೇತೃತ್ವದಲ್ಲಿ ಗಂಗರು ಚೋಳರ ವಿರುದ್ಧ ನಡೆಸಿದ ಯುದ್ಧಗಳು ಈ ಪ್ರದೇಶದವರೆಗೂ ವ್ಯಾಪಿಸಿದ್ದು, ಇಲ್ಲಿನ ವೀರರೂ ಕೂಡ ಆ ಯುದ್ದಗಳಲ್ಲಿ ಭಾಗಿಗಳಾಗಿದ್ದರು ಎಂದು ಹೇಳಬಹುದಾಗಿದೆ.

**ಚೋಳರ ಕಾಲ:**

5ನೇ ರಾಚಮಲ್ಲನ ಅಧಿಕಾರಾವಧಿಯಲ್ಲಿ ಚೋಳರು ಸ್ವಲ್ಪ ಭಾಗವನ್ನು ವಶಪಡಿಸಿಕೊಂಡಿದ್ದರು. ಚೋಳರು ಕ್ರಿ.ಶ. 1074ರಲ್ಲಿ ಗಂಗರನ್ನು ಸೋಲಸಿ ತಲಕಾಡನ್ನು ವಶಪಡಿಸಿಕೊಳ್ಳುವುದಕ್ಕಿಂತ ಮೊದಲೆ, ಬೆಂಗಳೂರು ಜಿಲ್ಲೆಯ ಪೂರ್ವ ಭಾಗಗಳು ಚೋಳರ ವಶವಾಗಿದ್ದವೆಂದು ಹೊಸಕೋಟೆ ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. 1000ರ ವೇಳೆಗೆ ಈ ತಾಲ್ಲೂಕು ಪ್ರದೇಶವು ಚೋಳರ ವಶವಾಗಿರಬೇಕು. ಮುಂದೆ ಸುಮಾರು 115 ವರ್ಷಗಳ ಕಾಲ, ಅಂದರೆ ಕ್ರಿ.ಶ. 1116ರ ಸುಮಾರಿಗೆ ಹೊಯ್ಸಳರು ಈ ಪ್ರದೇಶವನ್ನು ಆಳತೊಡಗುವ ವರೆಗೆ ಚೋಳರ ಆಳ್ವಿಕೆ ನಡೆಯಿತಾದರೂ ಅವರ ಕಾಲಕ್ಕೆ ಸೇರಿದ ಒಂದು ಶಾಸನವು ಕೂಡ ಈ ತಾಲ್ಲೂಕಿನಲ್ಲಿ ದೊರೆತಿಲ್ಲ. ಹೀಗೆ ಚೋಳರ ಕಾಲದ ಆಡಳಿತದ ನೇರ ಕುರುಹುಗಳು ದೊರೆಯದಿದ್ದರೂ ಅವರ 115 ವರ್ಷಗಳ ಆಳ್ವಿಕೆಯ ಪರಿಣಾಮ, ಪ್ರಭಾವಗಳಂತೂ ಮುಂದೆ ಈ ತಾಲ್ಲೂಕನ್ನು ಆಳಿದ ಹೊಯ್ಸಳರ ಕಾಲದಲ್ಲಿ

ಮುಂದುವರೆದಿರುವುದನ್ನು ಕಾಣಬಹುದು.

**ಹೊಯ್ಸಳರ ಕಾಲ:**

ಅಚ್ಚ ಕನ್ನಡ ಅರಸುಮನೆತನದವರು ಈ ಹೊಯ್ಸಳರ ಆಳ್ವಿಕೆಯ ಸಾಕ್ಷ್ಯಗಳಾಗಿ ಸುಮಾರು ಶಾಸನಗಳು ತಾಲ್ಲೂಕಿನಲ್ಲಿ ದೊರೆತಿದ್ದರೂ ಅವೆಲ್ಲವೂ ತಮಿಳು ಭಾಷೆಯಲ್ಲಿವೆ. ಹೊಯ್ಸಳರು ಆನೇಕಲ್ ಜೊತೆಗೆ ತಮಿಳುನಾಡಿನ ಹೊಸೂರು, ಡೆಂಕಣಿಕೋಟೆ ಪ್ರದೇಶಗಳ ಮೇಲೂ ಆಳ್ವಿಕೆ ನಡೆಸುತ್ತಿದ್ದರು. ಹೊಯ್ಸಳರ ವಿಷ್ಣುವರ್ಧನ ಚೋಳರ ಆಳ್ವಿಕೆಯನ್ನು ಕೊನೆಗಾಣಿಸುವವರೆಗೂ ಈ ಪ್ರದೇಶ ಚೋಳರ ಆಳ್ವಿಕೆಯಲ್ಲಿತ್ತು.

ತಾಲ್ಲೂಕಿನಲ್ಲಿ ದೊರೆತಿರುವ ಹೊಯ್ಸಳರ ಪ್ರಾಚೀನತೆಯ ಉಲ್ಲೇಖವು ಆನೇಕಲ್ಲಿನ ಪೂರ್ವದಿಕ್ಕಿಗಿರುವ ಹುಲ್ಲುಗಾವಲಿನ ಬಂಡೆಯ ಮೇಲಿದ್ದು, ಕ್ರಿ.ಶ. 1130ಕ್ಕೆ ಸೇರಿದೆ. ಈ ಶಾಸನವು ವೀರಗಂಗ ಹೊಯ್ಸಳ ಅಂದರೆ, ವಿಷ್ಣುವರ್ಧನದಾಗಿದೆ. ಕ್ರಿ.ಶ 1257ರ ಚಮ್ಮೇನಹಳ್ಳಿ ಶಾಸನವು ಹೊಯ್ಸಳ ರಾಮನಾಥನನ್ನು ಉಲ್ಲೇಖಿಸುತ್ತದೆ. ಕ್ರಿ.ಶ. 1278ರ ಬನ್ನೇರುಘಟ್ಟ ಶಾಸನವೊಂದು ಹೊಯ್ಸಳರ ಮುಮ್ಮಡಿ ವೀರನರಸಿಂಹನನ್ನು ವರ್ಣಿಸುತ್ತದೆ. ಕ್ರಿ.ಶ. 1302 ರಿಂದ 1334ರ ಅವಧಿಯ ಜಿಗಣಿ, ಸರ್ಜಾಪುರ, ಬಿದರಗೆರೆ, ಬೊಮ್ಮಂಡಹಳ್ಳಿ, ಹೀಲಲಿಗೆ ಹಾಗೂ ವಣಕನಹಳ್ಳಿಯ ಶಾಸನಗಳಲ್ಲಿ ಹೊಯ್ಸಳ ವೀರಬಲ್ಲಾಳನು ಹೆಸರಿಸಲ್ಪಟ್ಟಿದ್ದಾನೆ.

ವೀರಬಲ್ಲಾಳನಿಗೆ ವಗ್ಗೈಯನಾಯಕನ್, ಅಲ್ಲಪ್ಪ ನಾಯಕನ್ ಎಂಬ ಮಕ್ಕಳಿದ್ದ ಬಗ್ಗೆಯೂ ಶಾಸನಗಳು ಬೆಳಕು ಬೀರುತ್ತವೆ. ಕ್ರಿ.ಶ. 1307ರ ಬೆಂಗಳೂರು ಪೂರ್ವ ತಾಲ್ಲೂಕಿನ ಶಾಸನವೊಂದು ಹೊಯ್ಸಳರ ಆಡಳಿತದ ಬಗ್ಗೆ ಉಲ್ಲೇಖಿಸಿದೆ. ಕ್ರಿ.ಶ. 1306ರ ಕೆಂಪಾಪುರ ಗ್ರಾಮದಲ್ಲಿ ಹೊಯ್ಸಳರಿಗೆ ಸೇರಿದ ಒಂದು ದಾನಶಾಸನ ಲಭ್ಯವಾಗಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ವಿಲ್ಲಗಾಮುಂಡನಹಳ್ಳಿ ಎಂಬುದು ಆನೇಕಲ್ ತಾಲ್ಲೂಕಿನ ಸರ್ಜಾಪುರವೇ ಆಗಿದೆ. ಇವರ ಕಾಲದ ಶಾಸನಗಳಲ್ಲಿ 'ಪೂರ್ವಾಧಿರಾಜ' ರೆಂದು ನಾಮಾಂಕಿತರಾದ ಮಾಂಡಲಿಕರ ಪ್ರಸ್ತಾಪ ವಿಶೇಷವಾಗಿ ಕಂಡು ಬಂದಿದೆ.

ಹೊಯ್ಸಳರ ಆರಂಭಕಾಲದಲ್ಲಿ ವಿಷ್ಣುವರ್ಧನನ ಕಾಲದ ಶಾಸನಗಳು ಕ್ವಚಿತ್ತಾಗಿ ಕಂಡು ಬಂದರು, ಮುಂದೆ ಮುಮ್ಮಡಿ ಬಲ್ಲಾಳನ ಕಾಲದವರೆಗೂ ಹೊಯ್ಸಳದ ನೇರ ಆಳ್ವಿಕೆಯನ್ನು ಬಿಂಬಿಸುವ ಶಾಸನಗಳು ತೀರ ಕಡಿಮೆ ಸಂಖ್ಯೆಯಲ್ಲಿ ಲಭ್ಯವಾಗಿವೆ.

**ವಿಜಯನಗರ ಅರಸರ ಕಾಲ:**

ಹೊಯ್ಸಳರ ವಂಶದ ಆಳ್ವಿಕೆ ಕೊನೆಗೊಂಡ ನಂತರ ವಿಜಯನಗರದ ಅರಸರು ಆಳತೊಡಗಿದ್ದು, ಅವರ ಶಾಸನಗಳು ಆಳ್ವಿಕೆಗೆ ಸಾಕ್ಷಿಯಾಗಿ ದೊರೆಕುತ್ತದೆ. ಕ್ರಿ.ಶ. 1355ರ ನಂತರದಲ್ಲಿ ಬುಕ್ಕಣ್ಣ ಒಡೆಯನಿಂದ ಹಿಡಿದು ವೆಂಕಟಪತಿರಾಯ ಮತ್ತು ರಾಮದೇವರಾಯ ಮುಂತಾದ ಅರಸರ ಕಾಲದವರೆಗಿನ ಶಾಸನಗಳು ಬನ್ನೇರುಘಟ್ಟ, ಕತ್ತರಿಗುಪ್ಪೆ, ಆನೇಕಲ್, ಕೊಮ್ಮಸಂದ್ರ, ಮಾಯಸಂದ್ರ, ಜಿಗಣಿ, ಸರ್ಜಾಪುರ ಮುತ್ತಾನಲ್ಲೂರು ಗ್ರಾಮಗಳಲ್ಲಿ ದೊರೆತಿರುತ್ತವೆ.

ಬಿಲ್ವಗೊಂಡನಹಳ್ಳಿ ಸೀಮೆ ಎಂಬುದನ್ನು ಪ್ರಸ್ತಾಪಿಸುವ ಶಾಸನವೊಂದು ಕತ್ತರಿಗುಪ್ಪೆ ಗ್ರಾಮದಲ್ಲಿದೆ. ಇದು ವೀರ ಬಲ್ಲಾಳನ ಕಾಲಕ್ಕೆ ಸಂಬಂಧಪಟ್ಟಿರುತ್ತದೆ. ಸರ್ಜಾಪುರದಲ್ಲಿ ತಾಮ್ರ ಶಾಸನವೊಂದು ಲಭ್ಯವಾಗಿದೆ.

ಈ ಅರಸರ ಕಾಲಕ್ಕೆ ಸೇರಿದ ಶಾಸನವೊಂದು ಮಾಯಸಂದ್ರ ಗ್ರಾಮದಲ್ಲಿ ಲಭ್ಯವಾಗಿರುತ್ತದೆ. ಇದೊಂದು ಸಂತೆ ಮಾರುಕಟ್ಟೆ ಆಗಿತ್ತೆಂದು ವರ್ಣಿಸಿದೆ. ಕ್ರಿ.ಶ. 1427ರ ಮಾಸ್ತೇನಹಳ್ಳಿಯ ಶಾಸನವು ಮೊರಸುನಾಡು ಮಹಾಪ್ರಭು ಚೊಕ್ಕದೇವರ ಸೀಮೆಯೊಳಗಾದ ಮಹಾನಾಡು ಎಂಬುದನ್ನು ಉಲ್ಲೇಖಿಸಿದೆ.

**ಪಾಳೆಯಗಾರರ (ಸುಗಟೂರು) ಕಾಲ:**

ವಿಜಯನಗರದ ಅರಸು ಸಾಳ್ವ ನರಸಿಂಹದೇವ ಮಹಾರಾಯನ ಕ್ರಿ.ಶ. 1427ರ ಆಳ್ವಿಕೆಯ ಕಾಲಕ್ಕಾಗಲೇ ಆನೇಕಲ್ ತಾಲ್ಲೂಕು ಪ್ರದೇಶವು ಖ್ಯಾತರಾದ ಸುಗಟೂರು ವಂಶದ ಗೌಡಸಂತತಿಯವರ ಆಳ್ವಿಕೆಗೆ ಒಳಪಟ್ಟಿದ್ದ ಅಂಶ ಗುಮ್ಮಳಾಪುರದ ತಾಮ್ರಶಾಸನದಲ್ಲಿ ಲಭ್ಯವಾಗಿದೆ. ಸುಗಟೂರು ವಂಶದ ಪಾಳೆಯಗಾರರ ಆಳ್ವಿಕೆಯನ್ನು ಉಲ್ಲೇಖಿಸುವ ಪ್ರಾಚೀನ ಶಾಸನ ಕ್ರಿ.ಶ. 1422ಕ್ಕೆ ಸೇರಿದುದಾಗಿದೆ. ಈ ಶಾಸನವು ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕಿನ ಜೋಡಿಪುರ ಗ್ರಾಮದಲ್ಲಿದೆ. ಈ ಶಾಸನವು ವಿಜಯನಗರ ಅರಸು ಇಮ್ಮಡಿ ದೇವರಾಯನ ಕಾಲಕ್ಕೆ ಸೇರಿದ್ದು, ಸುಗುಟೂರಿನ ತಮ್ಮೇಗೌಡನದ್ದಾಗಿದೆ.

ಲಭ್ಯವಾಗಿರುವ ಪ್ರತಿಯೊಂದು ಶಾಸನಗಳು ಆನೇಕಲ್ ತಾಲ್ಲೂಕಿನ ಸಮಗ್ರ ದಾಖಲೆಗಳನ್ನು ಒದಗಿಸುವಲ್ಲಿ ಮಹತ್ವದ ಆಧಾರವಾಗಿವೆ. ಇನ್ನಷ್ಟು ಸಂಶೋಧನೆ ಕೈಗೊಂಡರೆ ಅಲಭ್ಯವಿರುವ ಶಾಸನಗಳು ದೊರೆತರೆ, ಚಾರಿತ್ರಿಕ ಅಂಶಗಳಿಗೆ ಪೂರಕವಾಗುವುದರಲ್ಲಿ ಯಾವುದೇ ಸಂಶಯವಿರುವುದಿಲ್ಲ.

## ಪರಾಮರ್ಶನ ಗ್ರಂಥಗಳು:


1. ಕೃಷ್ಣಮೂರ್ತಿ ಪಿ. ವಿ. (1994). ಸುಗಟೂರು ವೀರಶೈವ ಅರಸ ಮನೆತನ. ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.
2. ಕೃಷ್ಣಮೂರ್ತಿ ಪಿ. ವಿ. (2018). ಆನೆನಾಡು. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು ನಗರ ಜಿಲ್ಲೆ.
3. ವಿಜಯ್‌ಕುಮಾರ್ ಸಿ. ಆರ್. (2004). ಆನೇಕಲ್ ತಾಲ್ಲೂಕು ದರ್ಶನ. ಶ್ರೀ ಗೀತಾಲಯ ಪ್ರಕಾಶನ. ಬೆಂಗಳೂರು.
4. ಸೂರ್ಯನಾಥ್ ಕಾಮತ್. (1995). ಇತಿಹಾಸ ದರ್ಶನ. ಕರ್ನಾಟಕ ಇತಿಹಾಸ ಅಕಾಡೆಮಿ. ಬೆಂಗಳೂರು.
5. ರೈಸ್ ಬಿ. ಎಲ್. (ಸಂ). (1905). ಎಫಿಗ್ರಾಫಿಯ ಕರ್ನಾಟಕ. ಪ್ರಾಚ್ಯ ವಸ್ತು ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ಬೆಂಗಳೂರು.